# ‘ಮನಿ ಮೆಶಿನ್’ ಡೌನೀ

ಸತತ ಮೂರನೇ ವರ್ಷವೂ ಜಾಗತಿಕ ಸಿನಿಮಾದಲ್ಲಿ ‘ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ನಟ ’ ಎಂಬ ಅಗ್ಗಳಿಕೆಗೆ ಹಾಲಿವುಡ್ ತಾರೆ ರಾಬರ್ಟ್ ಡೌನೀ ಜೂ. ಪಾತ್ರನಾಗಿದ್ದಾನೆ. ಈ ವರ್ಷ (2014ರ ಜೂನ್‌ನಿಂದ 2015ರ ಜೂನ್‌ವರೆಗೆ) ಈತನ ಸಿನಿಮಾ ಸಂಪಾದನೆ ಬರೋಬ್ಬರಿ 80 ದಶಲಕ್ಷ ಡಾಲರ್! ಜಾಗತಿಕ ಮಟ್ಟದಲ್ಲಿ ಹಾಲಿವುಡ್ ತಾರೆಯರಿಗೆ ಈಗಲೂ ಸವಾಲು ಒಡ್ಡುತ್ತಿರುವ ಜಾಕಿ ಚಾನ್‌ನನ್ನೂ ರಾಬರ್ಟ್ ಡೌನೀ ಹಿಂದಿಕ್ಕಿದ್ದಾನೆ. ಜಾಕಿಯ ವರ್ಷದ ಗಳಿಕೆ 50 ದಶಲಕ್ಷ ಡಾಲರ್ ಅಷ್ಟೆ. ನಮ್ಮ ಸೂಪರ್‌ಸ್ಟಾರ್‌ಗಳಾದ ಅಮಿತಾಭ್ ಬಚ್ಚನ್ ಮತ್ತು ಸಲ್ಮಾನ್ ಖಾನ್ ಅವರೂ ಈ ಪಟ್ಟಿಯಲ್ಲಿದ್ದು ಏಳನೇ ಸ್ಥಾನ (ತಲಾ 33.5 ದಶಲಕ್ಷ ಡಾಲರ್) ದಲ್ಲಿದ್ದಾರೆ. ಡೌನೀ ನಟಿಸಿದ ಅವೆಂಜರ್ಸ್ ಸರಣಿಯಲ್ಲಿ ಬಂದ ‘ಅವೆಂಜರ್ಸ್: ಏಜ್ ಆಫ್ ಅಲ್ಟ್ರಾನ್’ ಅಂತೂ ಚೀನಾವೊಂದರಲ್ಲೇ 240 ದಶಲಕ್ಷ ಡಾಲರ್ ಗಳಿಸಿ ಬಾಕ್ಸಾಫೀಸಿನ ಹೊಸ ದಾಖಲೆ ಬರೆದಿದೆ. ಅತ್ಯಧಿಕ ಗಳಿಕೆಯ ನಟರ ಪಟ್ಟಿಯಲ್ಲಿ ಹಾಲಿವುಡ್ ದೈತ್ಯ ವಿನ್ ಡೀಸೆಲ್ ಮೂರನೇ ಸ್ಥಾನದಲ್ಲಿದ್ದರೆ, ಟಾಮ್ ಕ್ರೂಸ್ ಆರನೇ ಸ್ಥಾನದಲ್ಲಿದ್ದಾನೆ. 50ರ ಹರೆಯದ ರಾಬರ್ಟ್ ಡೌನೀ ಸದ್ಯಕ್ಕಂತೂ ಜಾಗತಿಕ ಸಿನಿಮಾದ ಮನಿ ಮೆಶಿನ್!



ಬಾಲಿವುಡ್‌ನಲ್ಲಿ ಹಾಸ್ಯ ಚಿತ್ರಗಳಿಗೆ ಅದರದ್ದೇ ಆದ ಪರಂಪರೆಯಿದೆ. ಚಾರ್ಲಿ ಚಾಪ್ಲಿನ್ ನಟಿಸಿದ ಸಿನಿಮಾಗಳು ಬಿಡಿ, ಅವನ ಮೇಲೆಯೇ ಅದೆಷ್ಟೊಂದು ಸಿನಿಮಾಗಳು ಬಂದಿವೆ! ಈಗಂತೂ ಪ್ಯೂರ್ ಕಾಮಿಡಿ, ಆ್ಯಕ್ಷನ್ ಕಾಮಿಡಿ, ಕ್ರೈಮ್ ಕಾಮಿಡಿ, ಹಾರರ್ ಕಾಮಿಡಿ– ಹೀಗೆ ಬಾಲಿವುಡ್‌ನಲ್ಲಿ ಕಾಮಿಡಿಗಳ ಸರಣಿಯೇ ಇದೆ. ರಾಬರ್ಟ್ ಬ್ರೌನೀ ಜೂ. ಮೂಲತಃ ಹಾಸ್ಯನಟ. ಆದರೆ ಆತ ನಿರ್ವಹಿಸಿದ ಪಾತ್ರಗಳು ಕಾಮಿಡಿಯ ಪರಿಧಿಯನ್ನೂ ದಾಟಿ ಪ್ರೇಕ್ಷಕರನ್ನು ತಲುಪಿರುವುದು ವಿಶೇಷ. ‘ಸೋಪ್‌ಡಿಶ್’ನಲ್ಲಿ ಆತ ನಿರ್ವಹಿಸಿದ ಕಾಮಿಡಿ ಪಾತ್ರವಂತೂ ಅನನ್ಯ. ವೀರ್ಡ್ ಸಯನ್ಸ್, ಏರ್ ಅಮೆರಿಕಾ, ದಿ ಸಿಂಗಿಂಗ್ ಡಿಟೆಕ್ಟಿವ್, ಗೊಥಿಕಾ, ಕಿಸ್‌ಕಿಸ್ ಬ್ಯಾಂಗ್ ಬ್ಯಾಂಗ್, ಜೋಡಿಯಾಕ್– ಹೀಗೆ ಆತ ನಟಿಸಿದ ಚಿತ್ರಗಳು ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ್ದು ಸುಳ್ಳಲ್ಲ. ಐರನ್‌ಮ್ಯಾನ್ ಸಿನಿಮಾ ಮೂರೂ ಸರಣಿ ಚಿತ್ರಗಳು ತಲಾ ಶತಕೋಟಿ ಡಾಲರ್ ಗಳಿಕೆ ಮಾಡಿದ್ದು, ಈತನನ್ನು ನಿರ್ಮಾಪಕರ ಅಚ್ಚುಮೆಚ್ಚಿನ ನಟನನ್ನಾಗಿಸಿತ್ತು.

ಹಾಗೆ ನೋಡಿದರೆ ಈತನ ವೃತ್ತಿಜೀವನ ಹೂವಿನ ಹಾಸಿಗೆಯೇನಲ್ಲ. ವೃತ್ತಿಜೀವನದ ಮಧ್ಯೆ ಅಫೀಮು, ಕೊಕೇನ್ ಮುಂತಾದ ಮಾದಕ ವ್ಯಸನಕ್ಕೆ ಸಿಲುಕಿ ಬೆಳ್ಳಿಪರದೆಯಿಂದಲೇ ಹೊರಕ್ಕೆ ನೂಕಲ್ಪಟ್ಟದ್ದೂ ಇದೆ. 1996ರಿಂದ 2001ರವರೆಗೆ ಈತ ಮಾದಕ ದ್ರವ್ಯಗಳ ಜತೆಗೆ ಸಿಕ್ಕುಬಿದ್ದು ಬಂಧನಕ್ಕೆ ಒಳಗಾದದ್ದು ಎಷ್ಟೋ ಸಲ! ಚಿಕಿತ್ಸೆ, ಪುನರ್ವಸತಿಯ ಬಳಿಕವೂ ಚಟ ಬಿಡದಿದ್ದಾಗ ನ್ಯಾಯಾಲಯ ಜೈಲಿಗೆ ತಳ್ಳಿತು. ಮೊದಲ ಸಲ ಶಿಕ್ಷೆ ಅನುಭವಿಸಿ ಜೈಲಿನಿಂದ ಹೊರಬಂದ ಡೌನೀ, ಟೀವಿ ಸೀರಿಯಲ್ ‘ಅಲ್ಲೈ ಮ್ಯಾಕ್‌ಬಿಲ್’ ನಲ್ಲಿ ಅದ್ಭುತವಾಗಿ ನಟಿಸಿದ. ಆ ನಟನೆಗಾಗಿ ಪ್ರತಿಷ್ಠಿತ ‘ಗೋಲ್ಡನ್ ಗ್ಲೋಬ್’ ಪ್ರಶಸ್ತಿಯೂ ಬಂತು. ಆದರೆ ಚಟ ಬಿಡಬೇಕಲ್ಲ. ಮತ್ತೆ ಜೈಲು ಪಾಲಾದ.

ವಿಚಾರಣೆಯ ವೇಳೆಗೆ ನ್ಯಾಯಾಧೀಶರೊಬ್ಬರು ಸಿಟ್ಟಿಗೆದ್ದಾಗ, ‘ಏನು ಮಾಡೋದು ಸ್ವಾಮಿ.. ನಮ್ಮಪ್ಪನೂ ಮಾದಕ ವಸ್ತುಗಳ ದಾಸನಾಗಿದ್ದ. ನನಗೆ ಎಂಟು ವರ್ಷ ಆಗಿದ್ದಾಗಲೇ ಅಪ್ಪನೇ ಇದನ್ನೆಲ್ಲ ತಿನ್ನಲು ಕೊಟ್ಟ. ಇದರಿಂದ ಹೊರಬರಲು ನೀವೂ ಸ್ವಲ್ಪ ಸಹಾಯ ಮಾಡಿ’ ಎಂದು ಡೌನೀ ಕೈಮುಗಿದಿದ್ದ. ಈತನ ಮಾದಕವಸ್ತುಗಳ ಚಟದಿಂದಾಗಿ ಕೈಹಿಡಿದ ಇಬ್ಬರು ಹೆಂಡತಿಯರೂ ದೂರವಾದರು. ಮೊದಲ ಸಲ ಜೈಲಿಗೆ ಹೋದಾಗ ಪತ್ನಿ ಸಾರಾ ಜೆಸಿಕಾ ಪಾರ್ಕರ್ ವಿಚ್ಛೇದನ ಪಡೆದರೆ, ಎರಡನೇ ಸಲ ಜೈಲಿಗೆ ಹೋದ ಬಳಿಕ ಪತ್ನಿ ಡಿಬೋರಾ ಕೂಡಾ ಕೈಬಿಟ್ಟಳು. ಕೊನೆಗೂ ಈ ಚಟದಿಂದ ಪಾರಾಗಿಬಂದ ಡೌನೀ, ಈಗ ಬಾಕ್ಸಾಫೀಸ್ ಹಿಟ್‌ಗಳನ್ನು ಕೊಡುತ್ತಿದ್ದಾನೆ. ಮೂರನೆ ಪತ್ನಿ ಮತ್ತು ಮಗುವಿನ ಜತೆಗೆ ನೆಮ್ಮದಿಯಿಂದ ಇದ್ದಾನೆ.

ರಾಬರ್ಟ್ ಡೌನೀಯ ನೆಮ್ಮದಿ ಕೆಡಿಸುವ ಒಂದು ಸುದ್ದಿಯೂ ಬಾಲಿವುಡ್‌ನಲ್ಲಿ ಈಗ ಚಾಲ್ತಿಯಲ್ಲಿದೆ. ‘ಐರನ್‌ಮ್ಯಾನ್–4’ ಸಿನಿಮಾಕ್ಕೆ ನಾಯಕನಾಗಿ ನಿರ್ಮಾಪಕರು ಡೌನೀಯನ್ನು ಕೈಬಿಟ್ಟು ಹಾರ್ಲೀ ಕೀನರ್‌ನನ್ನು ಆಯ್ಕೆ ಮಾಡುವ ಸಂಭವವಿದೆ ಎನ್ನುವುದೇ ಆ ಸುದ್ದಿ. ಐರನ್‌ಮ್ಯಾನ್–4 ರಲ್ಲಿ ನಟಿಸಬೇಕಿದ್ದರೆ ಕಾಂಟ್ರಾಕ್ಟ್ ನವೀಕರಣ ಮಾಡಿಕೊಂಡು, 100 ದಶಲಕ್ಷ ಡಾಲರ್ ಸಂಭಾವನೆ ಕೊಡಬೇಕು ಎಂದು ಡೌನೀ ಬೇಡಿಕೆ ಇಟ್ಟಿದ್ದಾನಂತೆ. ಹಾಗೆಂದೇ ಹೀರೋನನ್ನು ಬದಲಿಸುವ ಆಲೋಚನೆ ಹುಟ್ಟಿದೆಯಂತೆ. ಆದರೆ ಮೂರು ಸರಣಿಗಳಲ್ಲಿ ಬಾಕ್ಸಾಫೀಸನ್ನು ಪುಡಿಗಟ್ಟಿರುವ ಡೌನೀಯನ್ನು ಬದಲಿಸಿದರೆ, ಹೂಡಿದ ಬಂಡವಾಳ ವಾಪಸ್ ಬರಲಿಕ್ಕಿಲ್ಲ ಎನ್ನುವ ವಾದವೂ ಇದೆ. ಏನಿದ್ದರೂ ಸದ್ಯಕ್ಕೆ ಡೌನೀ ಓಡುವ ಕುದುರೆ. ಹಾಸ್ಯನಟನೊಬ್ಬ ಬಾಲಿವುಡ್‌ನ ಆ್ಯಕ್ಷನ್‌ಲೋಕದಲ್ಲಿ ಹೊಸ ಚರಿತ್ರೆ ಬರೆದಿರುವುದು ಕುತೂಹಲಕರ ಸಂಗತಿಯೇ ಸರಿ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65